ಈ ಕೆಲಸಗಳನ್ನು ನಾವು ಗಿರಿಯೇ ಇಸವಿಗೆ ಪೂರ್ಣಗೊಳಿಸಬೇಕೆಂದು ಗುರಿ ಇಟ್ಟು ಕೊಂಡಿದ್ದೇವೆ ಏಕೆಂದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ವ್ಯವಹಾರಗಳನ್ನು ನಾವು ತಹಬಂದಿಗೆ ತಂದಿರುವುದರಿಂದ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ನಾವು ಈ ಕಾರ್ಪೊರೇಷನ್‌ನವರು ಮಾಡುತ್ತಾ ಇರುವ ಕೆಲಸವನ್ನು ನೋಡುತ್ತಿದ್ದೇವೆ. ಅವರು ಚನ್ನಪಟ್ಟಣದಲ್ಲಿ ಒಂದು ಸೇತುವೆ ಕಟ್ಟುವ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಮಾಡುತ್ತಿರುವ ಕೆಲಸದಿಂದ ಅದು ಗಿರಿಯೇ ಇಸವಿಯ ಹೊತ್ತಿಗೆ ಮುಗಿಯುವುದಿಲ್ಲವೆಂದು ಕಾಣುತ್ತಿದೆ. ಅದೇನೇ ಇದ್ದರು ನಮ್ಮ ಈ ಕೆಲಸವನ್ನು ತಾವು ಯಾವಾಗ ಪ್ರಾರಂಭ ಮಾಡುತ್ತೀರಿ ? ಈಗ ಪ್ರತಿದಿನ ರೇಟುಗಳೆಲ್ಲಾ ಹೆಚ್ಚಾಗುತ್ತಿವೆ. ಅದನ್ನು ಕರೆಂಟ್ ರೇಟ್ಸ್‌ಗೆ ರಿವೈಸ್ ಮಾಡಿಸುತ್ತೀರಾ ? ಈ ಬಗ್ಗೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗ ನಿಮಗೂ ಒಂದು ಅಗ್ರಿಮೆಂಟ್ ಆಗಿದೆಯೇ ? Every day the dates are going up, Trh old rates have to be revised according to the current rates. The is some dispute between the construction Corporation and the Departments regarding the rates. ಈ ಬಗ್ಗೆ ತಮ್ಮ ಮಂದೆ ಮಾಹಿತಿ ಇದೆಯೇ ? ಅದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನ್ನ ಮಾಹಿತಿ ಪ್ರಕಾರ ಈ ರೇಟ್ಸ್ ಬಗ್ಗೆ ನಮ್ಮಲ್ಲಿ ಡಿಸ್ಪ್ಯೂಟ್ ಇಲ್ಲ. ಕೆಲವು ಎಕ್ವಿಪ್‌ಮೆಂಟ್‌ಗಳು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ರವರ ಹತ್ತಿರ ಇರಲಿಲ್ಲ. ಅವರು ನಮ್ಮ ಡಿಪಾರ್ಟ್‌ಮೆಂಟಿನವರನ್ನು ಕೊಡಿ ಎಂದು ಕೇಳಿದ್ದಾರೆ. ಅವರಿಗೆ ಎಕ್ವಿಪ್‌ಮೆಂಟ್‌ಗಳನ್ನು ಕೊಡಾವುದಕ್ಕಾಗುವುದಿಲ್ಲ ಎಂಬ ಅಭಿಪ್ರಾಯ ಇತ್ತು. ಆದರೂ ಅನೇಕ ಕಾರಣಗಳಿಂದ ಅದನ್ನು ಕೊಡಬೇಕಾಯಿತು. ಅವರು ಕೆಲಸವನ್ನು ಪ್ರಾರಂಭ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದು ಎಂದು ನನಗನ್ನಿಸುತ್ತದೆ. ಮೊನ್ನೆ ಬೋರ್ಡ್ ಮೀಟಿಂಗ್‌ನಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗ ಎಲ್ಲಾ ಕೆಲಸಗಳನ್ನೂ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಿಂದ ಮುಗಿಸಬೇಕು ಎನ್ನುವ ಅಭಿಪ್ರಾಯಕ್ಕೆ ಬರಲಿಲ್ಲ. ಆದರೆ ಈಗ ತೆಗೆದುಕೊಂಡಿರತಕ್ಕಂಥ ಕೆಲಸಗಳನ್ನು ಅವರಿಂದ ಮಾಡಿಸಬೇಕಾದ ಪರಿಸ್ಥಿತಿ ಇದೆ. ಅವರಿಗೆ ಮಷನರೀಸ್ ಎಲ್ಲವನ್ನೂ ಕೊಟ್ಟಿದ್ದೇವೆ. ಆದಷ್ಟು ಬೇಗ ಈ ಕೆಲಸಗಳನ್ನು ಮಾಡಿ ಮುಗಿಸಬೇಕು ಎಂದು ಬೋರ್ಡ್ ಮೀಟಿಂಗ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರಂತೆ ಬೇಗ ಮುಗಿಸಿಕೊಡುತ್ತೇವೆ.

MR. SPEAKER.—Any how the hon'ble Minister may please pull up the authorities to complete the constitution work. I also feel that the speed of the work is very very low. Now questions are over.

Questions for Answers on the Day (but not taken up)

Waiving of Sports and Reading Room Fee.

849. SRI ANDANAIAH (Kunigal).—

Will the Minister for Education be pleased to state :—

(a) whether it is a fact that the Government have exempted payment of fees which was being collected from students for providing games materials, news papers and other articles in order to provide free education to the students studying in Primary, Middle and High Schools ;

(b) whether it has come to the notice of the Government that the management of the shools are experiencing great hardship in providing news paper and games materials by purchasing the same for use by students of the schools because of the said exemption ;

(c) if so, the action taken or proposed to be taken by the Government to remove these difficulties ?

SRI B. SUBBIAH SHETTY Minister for Education—

(a) No. The said fee has been exempted only for the students of S.C., S.T. and some backward class communities.

(b) Some educational institutions have represented about their grievances in this regard.

(c) Detailed instruction have been issued regarding repayment of fee in the Government Order No. ED 39 CSS 78 dated 7th February, 1979.

(Absence of Ministers with-holding the questions)

MR. SPEAKER.—Next subject is Sri Muthinpendimath to call the attention of the hon. Revenue Minister.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಸ್ವಾಮಿ, ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚಿ ನಾನು ತಮ್ಮಲ್ಲಿ ಒಂದು ಮಾತನ್ನು ಕೇಳಬೇಕಾಗಿದೆ. ಇಲ್ಲಿರತಕ್ಕಂಥ ಪ್ರಶ್ನೆಗಳನ್ನು ನೋಡಿದಾಗ ೧೫ ಪ್ರಶ್ನೆಗಳಲ್ಲಿ ೫ ಪ್ರಶ್ನೆ ತಾವು ತಡೆಹಿಡಿದಿದ್ದೀರಿ. ಈ ಪ್ರಶ್ನೆಗಳು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಿರುವುದಾಗಿದೆ. ನಾವು ಪದೇ ಪದೇ ಈ ಮನೆಯಲ್ಲಿ ಈ ಮಾತನ್ನು ಎತ್ತುತ್ತಿದ್ದೇವೆ ; ಮಾನ್ಯ ಮುಖ್ಯ ಮಂತ್ರಿಗಳು ಈ ಪ್ರಶ್ನೆಗಳನ್ನೆಲ್ಲಾ ಮುಂದಕ್ಕೆ ಹಾಕಬೇಕೆನ್ನುವ ಬಗ್ಗೆ ಮಂತ್ರಿ ಅವರಿಗಿರಿತಕ್ಕ ಅನಾನುಕೂಲತೆಯ ಬಗ್ಗೆ ತಮಗೆ ಪತ್ರವನ್ನು ಬರೆದಿದ್ದಾರೆಯೇ ?

MR. SPEAKER.—The Hon. Chief Minister has gone to attend the meeting of Planning Commission.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಜೊತೆಗೆ ಇನ್ನೊಬ್ಬರು ಮಾನ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ೫ ಪ್ರಶ್ನೆಗಳಿವೆ. ಅದರಲ್ಲಿ ಒಕ್ಕೆ ಮಾನ್ಯ ಎಚ್. ಸಿ. ಶ್ರೀಕಂಠಯ್ಯನವರು ಉತ್ತರವನ್ನು ಕೊಟ್ಟಿದ್ದಾರೆ ; ಇನ್ನು ಒಂದು ಪ್ರಶ್ನೆ ಹೆಲ್ತ್ ಓವರ್ ಆಗಿದೆ. ಇಲ್ಲಿರತಕ್ಕಂಥ ೧೫ ಪ್ರಶ್ನೆಗಳಲ್ಲಿ ೧೦ ಪ್ರಶ್ನೆಗಳು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟದ್ದಾಗಿದೆ. ಮಾನ್ಯ ಮುಖ್ಯ ಮಂತ್ರಿಯವರೇನೋ ಪ್ಲಾನಿಂಗ್ ಕಮಿಷನ್ ಮೀಟಿಂಗ್‌ಗೆ ಹೋಗಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇನ್ನೊಬ್ಬರು ಮಾನ್ಯ ಮಂತ್ರಿಯವರು ಯಾವ ಕೆಲಸಕ್ಕೆ ಹೋಗಿದ್ದಾರೆ ? ಆ ಬಗ್ಗೆ ಅವರೇನಾದರೂ ತಮಗೆ ಪತ್ರ ಬರೆದು ತಿಳಿಸಿದ್ದಾರೆಯೇ ?

MR. SPEAKER.—The hon. Minister has gone to Sringeri along with the Governor. On behalf that Hon. Minister for Muncipal Administration had answered.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಯವರು ಮಾನ್ಯ ರಾಜ್ಯಪಾಲರ ಜೊತೆಯಲ್ಲಿ ಪ್ರವಾಸ ಹೋಗುವುದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಸರ್ವೇಸಾಧಾರಣ